<u>ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ ಎಮ್ ಎಫ್ ಸಿ ಇವರ ನ್ಯಾಯಾಲಯದಲ್ಲಿ</u>

<u>ಸ್ಥಳ : ಅಥಣಿ</u>

ಉಪಸ್ಥಿಥರು
ಶ್ರೀ ವಿಶ್ವನಾಥ ಸಿ. ಗೌಡರ
B.A.L,LL.M.
ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ ಎಮ್ ಎಫ್ ಸಿ, ಅಥಣಿ
ಸಿ.ಸಿ.ನಂ.897/2016

1) ಸರಕಾರದ ಪರವಾಗಿ
(ಅಬಕಾರಿ ಪೋಲಿಸ ಠಾಣೆ ಅಥಣಿ )

.....ಪಿರ್ಯಾದಿ

ಮತ್ತು

1) ಮಹಾದೇವ ಶೇಸಪ್ಪಾಮಾದರ
ವಯಸ್ಸುಃ 30 ವರ್ಷ, ಉದ್ಯೋಗ ಃ ಕೂಲಿ ಕೆಲಸ
ಸಾಃ ಬಳವಾಡ, ತಾಃ ಅಥಣಿ

....ಆರೋಪಿ

::ದೋಷಾರೋಪಣೆ::

ನಿನ್ನ ಮೇಲೆ ಮಾಡಿರುವ ದೋಷಾರೋಪಣೆ ಎನೆಂದರೆಃ

ಆರೋಪಿಯಾದ ನೀನು ದಿನಾಂಕ 14.12.2015 ರಂದು ಸಾಯಂಕಾಲ 06.30 ಗಂಟೆ ಸಮಯದಲ್ಲಿ ಬಳವಾಡ ಗ್ರಾಮದ ಮಲ್ಲಯ್ಯನ ಗುಡಿಯ ಹತ್ತಿರ ರಸ್ತೆಯ ಪಕ್ಕದಲ್ಲಿರುವ ತಿಪ್ಪೆಯಲ್ಲಿ ಕಬ್ಬಿನ ರವಂದಿ ಕೆಳಗಡೆ ಬೇಕಾಯ್ದೆಶೀರ ರೀತಿಯಿಂದ ನಿನ್ನ ಪಾಯ್ದೇಗೊಸ್ಕರ ಯಾವುದೇ ಲೈಸನ್ಸ ವ ಪರಮೀಟ ಇಲ್ಲದೆ ಅನಧಿಕೃತವಾಗಿ 3 ಬಾಕ್ಸಗಳಲ್ಲಿ ಪ್ರತಿಯೊಂದರಲ್ಲಿ 48x180 ಎಮಎಲದ ಒಟ್ಟು 144x180 ಎಮಎಲದ ಒಟಿ ವಿಸ್ಕಿ ಟೆಟ್ರಾ ಪ್ಯಾಕಗಳು ಹಾಗೂ ಒಂದು ಬಾಕ್ಸದಲ್ಲಿ ಬೆಂಗಳೂರು ಮಾಲ್ಟ ವಿಸ್ಕಿ 48x180 ಎಮಎಲದ ಟೆಟ್ರಾ ಪ್ಯಾಕಗಳನ್ನು ಮಾರಾಟಗೊಸ್ಕರ ಸಂಗ್ರಹಿಸಿಟ್ಟಿರುವಾಗ ಸಿಕ್ಕು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

ಆರೋಪಿಯಾದ ನೀನು ಮೇಲಿನ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಯಾವುದೇ ಪರಮೀಟ ಅಥವಾ ಲೈಸನ್ಸ ಹೊಂದದೇ ಬೇಕಾಯ್ದೇಶಿರವಾಗಿ ರೀತಿಯಿಂದ ಆಕ್ರಮವಾಗಿ ನಿನ್ನ ಪಾಯ್ದೇಗೊಸ್ಕರ ಯಾವುದೇ ಲೈಸನ್ಸ ವ ಪರಮೀಟ ಇಲ್ಲದೆ ಅನಧಿಕೃತವಾಗಿ 3 ಬಾಕ್ಸಗಳಲ್ಲಿ ಪ್ರತಿಯೊಂದರಲ್ಲಿ 48x180 ಎಮಎಲದ ಒಟ್ಟು 144x180 ಎಮಎಲದ ಒಟಿ ವಿಸ್ಕಿ ಟೆಟ್ರಾ ಪ್ಯಾಕಗಳು ಹಾಗೂ ಒಂದು ಬಾಕ್ಸದಲ್ಲಿ ಬೆಂಗಳೂರು ಮಾಲ್ಟ ವಿಸ್ಕಿ 48x180 ಎಮಎಲದ ಟೆಟ್ರಾ ಪ್ಯಾಕಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದು ಸದರಿ ಟೆಟ್ರಾ ಪ್ಯಾಕಗಳಲ್ಲಿ ಆರೊಗ್ಯಕ್ಕೆ ಹಾನಿ ಉಂಟು ಮಾಡುವ ಪಾನಿ ಇದೆ ಎಂದು ಗೊತ್ತಿದ್ದರು ಸಹಿತ ಮಾರಾಟಗೊಸ್ಕರ ನಿನ್ನ ಸಾಧ್ವಿನದಲ್ಲಿಟ್ಟುಕೊಂಡು ಭಾರತೀಯ ದಂಡ ಸಂಹಿತೆ ಕಲಂ 273 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 16.10.2019 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

(ವಿಶ್ವನಾಥ ಸಿ. ಗೌಡರ)
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತುಜೆ.ಎಂ.ಎಫ್.ಸಿ., ಅಥಣಿ.